ಪ್ರಜಾವಾಣಿ

ಶುಕ್ರವಾರ, ಫೆಬ್ರುವರಿ 10, 2006

E-mail this Page

ಇಂದಿನ ಪುರವಣಿ

ಮೆಟ್ರೊ ಬೆಂಗಳೂರು

ಇಂದಿನ ಸಂಚಿಕೆ
ಮುಖಪುಟ

ಸುದ್ದಿಗಳು
ರಾಷ್ಟ್ರೀಯ
ರಾಜ್ಯ
ಬೆಂಗಳೂರು
ಜಿಲ್ಲಾ
ವಾಣಿಜ್ಯ
ಕ್ರೀಡಾ
ಸಂಪಾದಕೀಯ
ಹೊರನಾಡ ಕನ್ನಡಿಗರು
ನಿಮ್ಮ ಅನಿಸಿಕೆ
ಅರಿವಿನ ಅಂತರಾಳ
ನಾಡು ನಾಡಿ
ಈ ಭಾನುವಾರ
ನಾವು ನೋಡಿದ ಚಿತ್ರ

Advertisement
ಜಾಹೀರಾತುದಾರರಿಗೆ

ನಿನ್ನೆಯ ಸಂಚಿಕೆ
ಸಂಪಾದಕರಿಗೆ ಪತ್ರ
ಹಿಂದಿನ ಸಂಚಿಕೆಗಳು

ಪ್ರಜಾವಾಣಿ » ಸಿನಿಮಾ ರಂಜನೆ

# ರಂಗಪ್ರೇಮಿಯ ಮಂದಹಾಸ

ವಿಶಾಖ ಎನ್.



‘ರೋಡ್’- ಹಾಗೊಂದು ಶೀರ್ಷಿಕೆಯ ಇಂಗ್ಲಿಷ್ ಕಥೆ ಬರೆದು ಯು.ಆರ್. ಅನಂತಮೂರ್ತಿ ಅವರಿಗೆ ಹುಡುಗನೊಬ್ಬ ತೋರಿಸಿದ. ಆಗ ಅವನ ವಯಸ್ಸಿನ್ನೂ ಹದಿನೇಳೋ ಹದಿನೆಂಟೋ ಇರಬಹುದು. ‘ನೀನು ಯಾವ ಭಾಷೆಯಲ್ಲಿ ಯೋಚನೆ ಮಾಡ್ತೀಯಾ ಅಂತ ಮೊದಲು ಸ್ಪಷ್ಟವಾಗಿ ಚಿಂತಿಸು’ ಎಂದಷ್ಟೇ ಅನಂತಮೂರ್ತಿ ಹೇಳಿದರು.

ಆಮೇಲೆ ‘ರೋಡ್’ ಕಥೆ ‘ರಸ್ತೆ’ ಎಂದು ಕನ್ನಡದಲ್ಲಿ ಬರೆಸಿಕೊಂಡಿತು. ಅದನ್ನು ಕಿ.ರಂ ನಾಗರಾಜ್ ಓದಿದರು. ‘ಎರಡೂ ಕಥೆಗಳನ್ನು ಅಕ್ಕಪಕ್ಕ ಇಟ್ಟುಕೊಂಡು ಹೋಲಿಸು. ಕನ್ನಡದಲ್ಲಿ ಯಾಕೆ ಬರೀಬೇಕು ಅಂತ ನಿನಗೇ ಗೊತ್ತಾಗುತ್ತೆ’ ಅಂದರು. ಅಲ್ಲಿಂದಾಚೆಗೆ ಹುಡುಗ ಕನ್ನಡದಲ್ಲೇ ಯೋಚಿಸಲು ಶುರು ಮಾಡಿದ.

ಆತ್ಮಸಂತೋಷಕ್ಕೆಂದು ಬರೆದಿಟ್ಟುಕೊಂಡ ಕಥೆಗಳು ಸಾಕಷ್ಟಿವೆ. ಇಂಗ್ಲಿಷ್ ಪತ್ರಿಕೆಯೊಂದರಲ್ಲಿ ಏಳು ವರ್ಷ ನಾಟಕಗಳ ವಿಮರ್ಶೆ ಬರೆಯುತ್ತಲೇ ಬ್ಯಾಕ್ ಸ್ಟೇಜ್ ಆರ್ಟಿಸ್ಟ್ ಆಗಿ ಸುಖಿಸಿದ ಹುಡುಗ ನಟನಾಗಿದ್ದು ಅಕಸ್ಮಾತ್ ಅಷ್ಟೆ.

ಹೆಸರು ಸತೀಶ್. ಗೌರವರ್ಣ. ಆತ್ಮವಿಶ್ವಾಸದಷ್ಟೇ ಮಜಬೂತಾದ ದೇಹ. ನಾಟಕಗಳಲ್ಲಿ ನಟಿಸಿದ ಹಿನ್ನೆಲೆ ಇರುವುದರಿಂದ ಅಭಿನಯಿಸಲು ಕಸರತ್ತು ಮಾಡುವ ಕಷ್ಟ ಈತನಿಗಿಲ್ಲ. ಪಾತ್ರಗಳ ಹಿಂದೆ ಈತ ಯಾವತ್ತೂ ಬಿದ್ದಿಲ್ಲ. ಓದಿಕೊಂಡ ಪತ್ರಿಕೋದ್ಯಮ ಮೊದಲಿನಿಂದಲೂ ಕಾಪಾಡುತ್ತಿದೆ. ‘ಫೋರ್ತ್ ಕಾರ್ನರ್’ ಎಂಬ ತನ್ನದೇ ಕನ್ಸಲ್ಟೆನ್ಸಿ ಸಂಸ್ಥೆ ನಡೆಸುತ್ತಲೇ ನಾಟಕದ ಗೀಳನ್ನು ಪಾಲಿಷ್ ಮಾಡುತ್ತಾ ಇದ್ದಾನೆ.

‘ಸಮುದಾಯ’ದಲ್ಲಿ ಹದಿನಾಲ್ಕು ವರ್ಷಗಳಿಂದ ತೊಡಗಿಕೊಂಡಿರುವ ಸತೀಶ್ ರಂಗಭೂಮಿಯಲ್ಲಿ ಮಾಡಿರುವ ಕೆಲಸಗಳ ಪಟ್ಟಿ ಸಣ್ಣದೇನೂ ಅಲ್ಲ. ಕಸ ಗುಡಿಸುವುದರಿಂದ ಹಿಡಿದು ಬೆಳಕಿನ ವ್ಯವಸ್ಥೆ ಮಾಡುವವರೆಗೆ ಎಲ್ಲವನ್ನೂ ಕಣ್ಣಿಗೊತ್ತಿಕೊಂಡ ಹುಡುಗ ಈಗ ಜನಪ್ರಿಯ ನಾಟಕವೊಂದರ ನಿರ್ದೇಶಕ. ಟಿ.ಪಿ.ಕೈಲಾಸಂ ಅವರ ‘ಅಮ್ಮಾವ್ರ ಗಂಡ’ ನಾಟಕವನ್ನು ಈತ ನಿರ್ದೇಶಿಸಿದ್ದಾನೆ. ಅದು ಐದು ಪ್ರದರ್ಶನ ಕಂಡಿದೆ. ‘ಶ್ರೀನಾಥ್ ವಸಿಷ್ಠ ಹಾಗೂ ಅಜಿತ್ ಹಂದೆ ಈ ನಾಟಕದಲ್ಲಿ ನಟಿಸಿದ್ದಾರೆ. ಪ್ರತಿ ಶೋಗೂ ಅಷ್ಟೂ ಟಿಕೆಟ್ ಖಾಲಿಯಾಗಿವೆ. ಸುಮಾರು ನೂರು ನೂರೈವತ್ತು ಜನ ಟಿಕೆಟ್ ಸಿಗದೆ ಬೇಜಾರು ಮಾಡಿಕೊಂಡು ಹೋಗಿದ್ದಾರೆ. ಅದಕ್ಕಿಂತ ಇನ್ನೇನು ಮೆಚ್ಚುಗೆ ಬೇಕು ಹೇಳಿ’ ಅಂತಾನೆ ಸತೀಶ್. ಜಿ.ವಿ.ಶಿವಾನಂದ್ ಅವರ ‘ಬೆಂಬಿಡದ ಭೂತ’ ನಾಟಕವನ್ನು ನಿರ್ದೇಶಿಸುವ ಯೋಚನೆಯನ್ನು ಕಾರ್ಯರೂಪಕ್ಕೆ ತರುವ ತಯಾರಿಯನ್ನೂ ನಡೆಸಿದ್ದಾನೆ.

ಮಡಿವಂತರ ಕುಟುಂಬದ ಹುಡುಗ ಸತೀಶ್ ಮನಸ್ಸು ಮೊದಲಿನಿಂದಲೂ ಕಲೆಗೆ ತುಡಿಯುತ್ತಲೇ ಇದೆ. ಚೆನ್ನಾ

ಇ
ಪರಮ ಬ್ಯ
‘ಹನಿಮೂನ
ಅಕ್ಕಿ, ಕತ್ರೀ
ಹನಿಮೂನ್
ಪಯಣ »
ಆತ್ಮಾವಲೋ
ನೆಮ್ಮದಿಯ
ಪತ್ರಕರ್ತನ
ರಂಗಪ್ರೇಮಿ
ಸೇಮ್ ಉ
»
ಶಂಕರನ ಹ
ಮೈಥಿಲಿ »
ಭರವಸೆಯ
‘ಸೇವಂತಿ’ಯ
ಲಕ್ಷ! »
ಹೀರೋ ಸ
ಜಗ್ಗೇಶ್ ನ
ಮರಾಠಿಯಿ
‘ಮಣಿ’ ಮ
»
ಗಂಡ ಹೆಂಡ
»

ಪ



ಗಿ ಪೇಂಟ್ ಮಾಡಬಲ್ಲ. ಬಸವನಗುಡಿಯ ನ್ಯಾಶನಲ್ ಕಾಲೇಜಿನಲ್ಲಿ ಓದುವಾಗಲೇ ಸಾಹಿತ್ಯ ಪ್ರೀತಿಯೂ ಬೆಳೆಯಿತು. ‘ಅದಕ್ಕೆ ಕಾರಣ ಇಂಗ್ಲಿಷ್ ಉಪನ್ಯಾಸಕರಾದ ಶೆರೀನ್ ಹಾಗೂ ಸುಜಾತಾ ಶ್ರೀಪತಿ’ ಅಂತ ಈಗಲೂ ಸ್ಮರಿಸುತ್ತಾನೆ.

ಎರಡು ವರ್ಷಗಳ ಹಿಂದೆ ಅದೊಂದು ದಿನ ಸಿಹಿಕಹಿ ಚಂದ್ರು ಕಿರುತೆರೆ ಧಾರಾವಾಹಿಯಲ್ಲಿ ನಟಿಸಲು ಬುಲಾವು ಕೊಟ್ಟರು. ‘ಯಾಕ್ ಹಿಂಗಾಡ್ತಾರೋ’ ಧಾರಾವಾಹಿಯಲ್ಲಿ ಅವಕಾಶ ಸಿಕ್ಕಿದ್ದು ಹಾಗೆ. ಆಮೇಲೆ ಸತೀಶ್ ಯಾವುದೇ ಪಾತ್ರವನ್ನು ಹುಡುಕಿಕೊಂಡು ಹೋಗಲಿಲ್ಲ. ‘ಚಂದ್ರು ನನ್ನ ಗಾಡ್ ಫಾದರ್’ ಅನ್ನುವ ಈತ ‘ಸಿಲ್ಲಿ ಲಲ್ಲಿ’ ಧಾರಾವಾಹಿಯಲ್ಲೂ ನಟಿಸಿದ್ದಾನೆ.

ಶಂಕರ್‌ನಾಗ್, ಅಮಿತಾಬ್ ಬಚ್ಚನ್ ನಟನೆಯನ್ನು ಮೆಚ್ಚಿಕೊಳ್ಳುವ ಸತೀಶ್‌ಗೆ ಖಳನಾಯಕನಾಗುವ ದೊಡ್ಡ ಬಯಕೆಯಿದೆ. ‘ಕನಿಷ್ಠ ಒಂದು ಮರ್ಡರ್ ಮಾಡುವ ಅವಕಾಶ ಇರಲೇಬೇಕು’ ಅನ್ನೋದು ಕಂಡೀಷನ್! ಮಾತುಮಾತಿನ ನಡುವೆ ಮೆಚ್ಚುಗೆಯಾಗೋದು ಈ ರಂಗಪ್ರೇಮಿಯ ಮಂದಹಾಸ.

ದಿ ಪ್ರಿಂಟರ್ಸ್ (ಮೈಸೂರು) ಪ್ರೈ. ಲಿ., ನಂ. 75, ಎಂ.ಜಿ. ರಸ್ತೆ, ಬೆಂಗಳೂರು – 01. ದೂ. : 25880000 ಫ್ಯಾಕ್ಸ್ : 25880618